# ವೈಚಾರಿಕ ಸಂಸ್ಕೃತಿಯ ನಿರ್ಮಾಣ ಮತ್ತು ಎಚ್.ಜಿ. ಸಣ್ಣಗುಡ್ಡಯ್ಯ

**ಪದ್ಮಜಾ ವೈ.ಎಂ.**

ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು.

DOI: https://doi.org/10.5281/zenodo.17013598

## ABSTRACT:

ಸಣ್ಣಗುಡ್ಡಯ್ಯನವರು ಕನ್ನಡ ನಾಡಿನ ತುಮಕೂರು ಸ್ಥಳೀಯ ಭಾಗದ ಗ್ರಾಮೀಣ ಪ್ರತಿಭೆ. ಇವರು ಕವಿಯಾಗಿ, ಉತ್ತಮ ಅನುವಾದಕರಾಗಿ, ಶ್ರೇಷ್ಠ ಪ್ರಬಂಧಕಾರರಷ್ಟೇ ಅಲ್ಲದೆ, ಉತ್ತಮ ಅಧ್ಯಾಪಕರಾಗಿ ತಮ್ಮದೇ ಸೃಜನಶೀಲ ವ್ಯಕ್ತಿತ್ವವನ್ನು ಗಳಿಸಿಕೊಂಡಿದ್ದರು. ಇವರು ಬೆರಳೆಣಿಕೆಯಷ್ಟು ಸೃಜನಶೀಲ, ಸೃಜನೇತರ ಕೃತಿಗಳನ್ನು ರಚಿಸಿದ್ದು ಗಾತ್ರದಲ್ಲಿ ಕಿರಿದಾಗಿದ್ದರೂ ಸತ್ವದಲ್ಲಿ ಉತ್ಕೃಷ್ಟ ರಚನೆ ಎನಿಸಿವೆ.

ಸಣ್ಣಗುಡ್ಡಯ್ಯನವರು ತಮ್ಮ ಸ್ಥಳೀಯ ವಲಯದಲ್ಲಿ (ತುಮಕೂರು) ಆರೋಗ್ಯಕರ ಪರಿಸರವನ್ನು ನಿರ್ಮಾಣ ಮಾಡಲು ಅವಿರತವಾಗಿ ಶ್ರಮಿಸಿದ್ದಾರೆ. ತಮ್ಮದೇ ಎಡಪಂಥೀಯ ಚಿಂತನ ಗ್ರಹಿಕೆಗಳಿಂದ ಮಾರ್ಕ್ಸ್ವಾದ ತುಮಕೂರಿನ ಸ್ಥಳೀಯ ಮಟ್ಟದಲ್ಲಿ ನೆಲೆಯೂರಲು ಅವರು ತೋರಿದ ಶ್ರದ್ಧೆ ಅನನ್ಯವಾದುದು. ಇದು ಸ್ಥಳೀಯ ಭಾಗದ ಕಿರಿಯ ತಲೆಮಾರಿನ ಸಾಹಿತಿಗಳಿಗೆ ಸ್ಫೂರ್ತಿದಾಯಕವಾಗಿದೆ. ಇವರ ಎಡಪಂಥೀಯ ಚಿಂತನೆಗಳಿಗೆ, ಮಾರ್ಕ್ಸ್‌ವಾದಿ ವಿಚಾರಗಳಿಗೆ ಹಲವಾರು ಸಹೃದಯ ವಿಚಾರವಂತರು ತುಮಕೂರಿನ ಕೇಂದ್ರಸ್ಥಾನವಾದ ಒಕ್ಕಲಿಗರ ಹಾಸ್ಟೆಲ್‌ನ ಪಕ್ಕದಲ್ಲಿದ್ದ ಟೈಲರಿಂಗ್ ಹಾಲ್‌ನಲ್ಲಿ ಸೇರಿಕೊಂಡು ನಾಡು-ನುಡಿಗೆ ಸಂಬಂಧಿಸಿದಂತೆ ಚರ್ಚೆ ನಡೆಸುತ್ತಿದ್ದು, ಇದೆಲ್ಲವೂ ಜಿಲ್ಲೆಯಲ್ಲಿ ಸಾಹಿತ್ಯಿಕ ಪರಿಸರ ಬೆಳೆಯಲು ಕಾರಣವಾಗಿದ್ದನ್ನು ಸ್ಮರಿಸಬಹುದು. ಜೊತೆಗೆ ಸಮಕಾಲೀನ ಬರಹಗಾರರಿಗೆ ಮಾರ್ಗದರ್ಶಕರಾಗಿದ್ದ ಬಗೆಯನ್ನು ತಿಳಿಯುವುದು ಇಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ.

## KEYWORDS:

ಸಣ್ಣಗುಡ್ಡಯ್ಯ, ಮಾರ್ಕ್ಸ್‌ವಾದಿ, ಎಡಪಂಥೀಯ, ಸಹೃದಯ, ಸಾಹಿತ್ಯಿಕ ಪರಿಸರ.

ಸಣ್ಣಗುಡ್ಡಯ್ಯನವರು ವಿಚಾರವಂತರಾಗಿದ್ದು, ವಿಚಾರಪರ ಆಲೋಚನೆಗಳ ಮೂಲಕ ತಮ್ಮ ಶಿಷ್ಯರಲ್ಲಿ ಹಾಗು ತಮ್ಮ ಕಾರ್ಯಕ್ಷೇತ್ರವಾದ ತುಮಕೂರಿನಲ್ಲಿ ವೈಚಾರಿಕ ಆಲೋಚನೆಗಳನ್ನು ಬೇರು ಬಿಡಿಸುವಲ್ಲಿ ತೋರಿದ ಶ್ರದ್ಧೆ ಅನನ್ಯವಾದದ್ದು. ಎಚ್.ಜಿ.ಎಸ್ ಎಂದೇ ಹೆಸರಾದ ಸಣ್ಣಗುಡ್ಡಯ್ಯನವರು ತುಮಕೂರನ್ನು ಸಾಹಿತ್ಯಿಕ–ಸಾಂಸ್ಕೃತಿಕ ಮತ್ತು ವೈಚಾರಿಕ ವಲಯದ ಕೇಂದ್ರಸ್ಥಾನವಾಗಿ ರೂಪಿಸಲು ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

ಇವರು ತಾವು ಬದುಕಿ ಬಾಳಿದ ಪರಿಸರದಲ್ಲಿ ಒಂದು ಆರೋಗ್ಯಕರ ಪರಿಸರವನ್ನು ನಿರ್ಮಾಣ ಮಾಡಿದರು. ತುಮಕೂರು ನಗರದಲ್ಲಿ 'ಮಾರ್ಕ್ಸ್ವಾದ' ಬೇರು ಬಿಡುವುದಕ್ಕೆ ಪ್ರಮುಖವಾಗಿ ಕಾರಣರಾದರು. ಇಲ್ಲಿ ಸಣ್ಣಗುಡ್ಡಯ್ಯನವರದೊಂದು 'ಜನತಾ ಪುಸ್ತಕಾಲಯ' ಎಂಬ ಪುಸ್ತಕದ ಅಂಗಡಿಯಿತ್ತು, ಅಲ್ಲಿ ಸುತ್ತಮುತ್ತಲಿನ ಲೇಖಕರು, ಅನೇಕ ಸಹೃದಯ ವಿಚಾರವಂತರೆಲ್ಲಾ ಇವರ ಚಿಂತನ ಕೇಂದ್ರಕ್ಕೆ ಸೇರಿ ಆತ್ಮೀಯವಾಗಿ ಚರ್ಚೆ ನಡೆಸುವುದರೊಂದಿಗೆ ನಾಡಿನಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ತಮ್ಮದೇ ಕಾಣ್ಕೆ ನೀಡಿದ್ದಾರೆ. ಕಮ್ಯುನಿಸ್ಟ್ ಧುರೀಣರಾದ ಕೆ.ಆರ್.ನಾಯಕ್, ಕವಿ ವೀ.ಚಿ, ವಿಚಾರವಂತರಾದ ಸಣ್ಣಗುಡ್ಡಯ್ಯನವರು, ಚಲನಚಿತ್ರ ನಟ ಲೋಹಿತಾಶ್ವ, ಕೆ.ಸಿ.ರಾಮಯ್ಯ, ಇನ್ನು ಅನೇಕ ಸಹೃದಯ ವಿಚಾರವಂತರು ಅಲ್ಲಿ ಸೇರುತ್ತಿದ್ದರು. ಇಡೀ ನಾಡು ದೇಶ, ವಿದೇಶದ ಬಗ್ಗೆ, ಸಿದ್ಧಾಂತಗಳ ಬಗ್ಗೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಮಂಥನ ಕಾರ್ಯ ನಡೆಸುತ್ತಿದ್ದರು. ಹಾಗಾಗಿ ಪ್ರಗತಿಪರ ಚಿಂತಕರು ಜಿಲ್ಲೆಯಲ್ಲಿ ರೂಪುತಾಳಲು ಇದು ಒಂದು ಕಾರಣವಾಯಿತು. ಇವರು ತಾವು ತೆರೆದ ಪುಸ್ತಕದಂಗಡಿಯಿಂದ ಆರ್ಥಿಕ ಲಾಭ ಮಾಡಿಕೊಳ್ಳದಿದ್ದರೂ, ಎಡಪಂಥೀಯ ಚಿಂತನ ಕೇಂದ್ರವಾಗಿ ರೂಪಿಸುವಲ್ಲಿ ಯಶಸ್ವಿಯಾದರು.

ನಮ್ಮ ಸುತ್ತುಮುತ್ತಲಿನ ಸಮಾಜದಲ್ಲಿ ವ್ಯಾಪಿಸಿದ್ದ ಅಶಾಂತಿ, ಅನ್ಯಾಯ, ಆರ್ಥಿಕ ಅವ್ಯವಸ್ಥೆ ಮತ್ತು ಮನುಷ್ಯ ಮನುಷ್ಯರ ನಡುವೆ ಬೆಳೆದು ನಿಂತಿದ್ದ ತಾರತಮ್ಯಗಳು, ಈ ಎಲ್ಲಾ ಅನಿಷ್ಟಗಳಿಗೂ ಪರಿಹಾರವನ್ನು ಒದಗಿಸಬಲ್ಲ ಏಕೈಕ ತತ್ವ ಮತ್ತು ಆಡಳಿತ ವ್ಯವಸ್ಥೆ ಎಲ್ಲಾದರೂ ಇದ್ದರೆ ಅದು ಮಾರ್ಕ್ಸ್‌ವಾದಿ ರಾಜಕೀಯ ವ್ಯವಸ್ಥೆಯಲ್ಲಿ ಮಾತ್ರ ಎಂದು ದೃಢವಾಗಿ ನಂಬಿದ್ದ ಸಣ್ಣಗುಡ್ಡಯ್ಯನವರು ತುಮಕೂರು ನಗರದಲ್ಲಿ ಮಾರ್ಕ್ಸ್ವಾದ ನೆಲೆ ಊರಲು ತೋರಿದ ಶ್ರದ್ಧೆ, ಪರಿಶ್ರಮ ಗಮನಾರ್ಹವಾದದ್ದು. 'ಸಕ್ರಿಯ ಕಾರ್ಯಕರ್ತನಂತೆ ಎಷ್ಟೋ ವೇಳೆ ಕೊರೆಯುವ ಚಳಿಯಲ್ಲಿ ತಾವೇ ಗೋಡೆಬರಹ ಬರೆದದ್ದುಂಟು, ಭಿತ್ತಿಪತ್ರಗಳನ್ನು ಅಂಟಿಸಿದ್ದುಂಟು'. ಎಂದು ಅವರ ಸಮಕಾಲೀನರು ಮತ್ತು ಶಿಷ್ಯರು ಇಂದಿಗೂ ಸ್ಮರಿಸುತ್ತಿದ್ದಾರೆ.

ಎಚ್.ಜಿ. ಸಣ್ಣಗುಡ್ಡಯ್ಯನವರು ತುಮಕೂರು ನಗರದಲ್ಲಿ ಸಾಹಿತ್ಯಿಕ ಹಾಗು

ಸಾಮಾಜಿಕ ಸೇವೆಗಾಗಿ ತಮ್ಮ ಶಕ್ತಿಯನ್ನು ವಿನಿಯೋಗಿಸಿದ್ದಾರೆ. ಸೇವೆಗೆ ಎರಡು ಮುಖ; ಒಂದು ಫಲಾಪೇಕ್ಷೆಯಿಲ್ಲದ ಸಮಾಜ ಸೇವೆ, ಇನ್ನೊಂದು ಸ್ವಾರ್ಥಸಾಧನೆಗಾಗಿ ಮಾಡುವ ಸಮಾಜ ಸೇವೆ. ಇವರದು ಮೊದಲನೆಯದು. ಎಚ್.ಜಿ.ಎಸ್. ಅವರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಿಜವಾದ ಕಳಕಳಿಯಿಂದ ಸಮಾಜ ಮತ್ತು ಸಾಹಿತ್ಯ ಸೇವೆಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ವಿಚಾರವಂತರಾದ ಸಣ್ಣಗುಡ್ಡಯ್ಯನವರು ಉತ್ತಮ ಪ್ರಾಧ್ಯಾಪಕರಾಗಿ ಅಪಾರ ಶಿಷ್ಯ ಬಳಗವನ್ನು ಬೆಳೆಸಿದವರು. ತಮ್ಮ ಪ್ರಖರ ಚಿಂತನೆಯಿಂದ ಶಿಷ್ಯರ ಮನಸ್ಸಿನಲ್ಲಿ ಉಳಿಯುವಂತಹ ವಿದ್ವಾಂಸರು ಎನಿಸಿದವರು. ಅವರು ತರಗತಿಯಲ್ಲಿ ಪಾಠಮಾಡುವ ಕ್ರಮಗಳೆಲ್ಲವೂ ವಿದ್ಯಾರ್ಥಿಗಳಿಗೆ ಹೊಸದಾದ ಸಾಹಿತ್ಯಿಕ ವಾತಾವರಣವನ್ನೇ ದೃಶ್ಯೀಕರಿಸುತ್ತಿತ್ತು ಎಂಬುದನ್ನು ಅವರ ಶಿಷ್ಯರು ಇಂದಿಗೂ ನೆನಪಿಸಿಕೊಳ್ಳುವುದು ಗಮನಾರ್ಹ ಸಂಗತಿ. ತಮ್ಮ ಪ್ರಖರವಾದ ಆಲೋಚನೆಗಳಿಂದ ವಿದ್ಯಾರ್ಥಿಗಳಿಗೆ ವಿಚಾರ ಪ್ರಬುದ್ಧತೆಯನ್ನು ತಿಳಿಸುವ ಜೊತೆಗೆ, ಅವರು ಕೂಡ ಪ್ರಬುದ್ಧವಾಗಿ ಆಲೋಚಿಸಿ ಬೆಳೆಯಬೇಕು ಎಂಬುದನ್ನು ಬಯಸುವಲ್ಲಿ ಎಚ್.ಜಿ.ಎಸ್ ಅವರ ನಿಸ್ವಾರ್ಥತೆ ಕಾಣಿಸುತ್ತದೆ.

ಅಧ್ಯಾಪಕರಾಗಿದ್ದ ಸಣ್ಣಗುಡ್ಡಯ್ಯನವರು ತಮ್ಮ ಪ್ರಖರವಾದ ವೈಚಾರಿಕತೆಯಿಂದಾಗಿ ಬೇಗ ಪ್ರಸಿದ್ಧಿ ಗಳಿಸಿದ್ದರು. ಜೊತೆಗೆ ಜನಾದರಣೀಯರೂ ಆಗಿದ್ದರು. ಎಚ್.ಜಿ.ಎಸ್ ಅವರ ಪಾಠ ಪ್ರವಚನವೆಂದರೆ ವಿದ್ಯಾರ್ಥಿಗಳಿಗೊಂದು ವೈಚಾರಿಕ ಸಮಾರಾಧನೆಯೇ ಆಗಿರುತ್ತಿತ್ತು. ಸ್ವತಃ ಅನುಭವಿಸಿ, ಅಭಿನಯಿಸಿ ಪಾಠ ಹೇಳುವ ವಿಶಿಷ್ಟ ರೀತಿಯಿಂದಾಗಿ ತಾವು ಕಂಡಿದ್ದನ್ನು, ಕೇಳಿದ್ದನ್ನು ಅವರ ಶಿಷ್ಯೋತ್ತಮರಿಗೆ ಎಲ್ಲವೂ ಮನಸ್ಸಿನಲ್ಲಿ ನೆಟ್ಟುಬಿಡುತ್ತಿದ್ದರು. ಎಂದು ಅವರ ಶಿಷ್ಯರಾದ ಚಲನಚಿತ್ರ ರಂಗದಲ್ಲಿ ಪೋಷಕನಟರಾಗಿ ಹೆಸರು ಗಳಿಸಿದ್ದ ದಿ.ಟಿ.ಎಸ್.ಲೋಹಿತಾಶ್ವ, ಆರ್.ಲಕ್ಷ್ಮೀನಾರಾಯಣ, ದೊಡ್ಡರಂಗೇಗೌಡ, ಲಲಿತಾ ಸಿದ್ಧಬಸವಯ್ಯ, ದಿ.ಸೋ. ಮು.ಭಾಸ್ಕರಚಾರ್, ಜಿ.ವಿ. ಆನಂದಮೂರ್ತಿ ಹಾಗೂ ಲಕ್ಷ್ಮೀಪತಿ ಕೋಲಾರ, ಬಾ.ಹ. ರಮಾಕುಮಾರಿ ಇವರಂತಹ ಶಿಷ್ಯರು ಮುಕ್ತವಾಗಿ ತಮ್ಮ ಗುರುಗಳನ್ನು ಹೊಗಳಿದ್ದಾರೆ. ಮೇಷ್ಟ್ರಾದ ಸಣ್ಣಗುಡ್ಡಯ್ಯನವರು ತಮ್ಮ ವಿದ್ಯಾರ್ಥಿಗಳ ಮೇಲೆ ಬೀರಿದ ಪ್ರಭಾವ ಅತ್ಯಂತ ಗಾಢವಾದದ್ದು. ಅವರ ಮೆಚ್ಚಿನ ವಿದ್ಯಾರ್ಥಿಗಳೆಲ್ಲಾ ಗುರುಗಳನ್ನು ಕುರಿತಂತೆ, ಅವರ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ, ಭಕ್ತಿ–ಪ್ರೀತಿಗಳಿಂದಲೇ ಮಾತಾಡುವುದಿದೆ. ಗುರುಗಳ ನಿರಾಡಂಬರವಾದ ಆದರೆ ಖಚಿತವಾದ, ಆಳವಾದ ವಿದ್ವತ್ತು ತಮ್ಮ ಸಾಹಿತ್ಯದ ವಿದ್ಯಾರ್ಥಿಗಳ ಅಧ್ಯಯನವನ್ನು ವ್ಯವಸ್ಥಿತವಾಗಿ ರೂಪಿಸಿದ್ದನ್ನು ಶ್ಲಾಘಿಸಿದ್ದಾರೆ.

ಕನ್ನಡ ನಾಡಿನ ಪ್ರಮುಖ ಕವಿ ದೊಡ್ಡರಂಗೇಗೌಡರು 'ಮರೆಯಲಾರೆ ನಾನಿವರ' ಎನ್ನುವ ಲೇಖನದಲ್ಲಿ ತಮ್ಮ ವಿದ್ಯಾಗುರುಗಳಾದ ಎಚ್.ಜಿ.ಎಸ್ ಬಗ್ಗೆ ವಿಶೇಷವಾಗಿ ಹಲವು ವಿಚಾರಗಳ ಬಗೆಗೆ ಚರ್ಚಿಸಿದ್ದಾರೆ. ತಾವು ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಓದುತ್ತಿದ್ದಾಗ ತಮ್ಮ ಶ್ರೇಷ್ಠತಮ ವರ್ತನೆಗಳು ಹಾಗೂ ಒಳ್ಳೆಯ ನಡವಳಿಕೆಗಳಿಂದ ಹೃನ್ಮನ ತುಂಬಿಕೊಂಡ ವ್ಯಕ್ತಿಯೆಂದರೆ ಸಣ್ಣಗುಡ್ಡಯ್ಯನವರು ಎಂಬುದನ್ನು ನೆನೆದಿದ್ದಾರೆ. "ಅವರದು ಸದಾ ಹರಿತ ಮಾತುಗಾರಿಕೆ. ಈಗಲೂ ಅಷ್ಟೇ ಪ್ರಖರ. ಈ ಇಳಿವಯಸ್ಸಿನಲ್ಲೂ ತಾವು ನಂಬಿದ ತತ್ವಗಳಿಗೆ ಅವರು ಸದಾಕಾಲ ಬದ್ಧರು, ವಿಚಾರದಲ್ಲಿ ಪ್ರಬುದ್ಧರು. ಎಂದೂ ಎಲ್ಲೂ ಹಣಕ್ಕಾಗಿಯಾಗಲೀ, ಜನಪ್ರಿಯತೆಗಾಗಲಿ, ಯಾರ ಬಳಿಯೂ ಎಳ್ಳಷ್ಟೂ ಹೊಂದಾಣಿಕೆ ಮಾಡಿಕೊಂಡವರಲ್ಲ. ಅವರ ತರಗತಿ ಎಂದರೆ ವೈಚಾರಿಕ ದಾಸೋಹ: ಅವರ ಮಾತು ಎಂದರೆ ಕತ್ತಿಯ ಅಲುಗಿನಂತೆ ಪ್ರಖರ: ಹರಿತ; ವಿಚಾರದಷ್ಟೇ ವಿಮರ್ಶೆ; ಅಲ್ಲೂ ಸ್ವೋಪಜ್ಞತೆ. ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಮಂಡಿಸಿ ತನ್ನ ಸ್ಪಷ್ಟ ಅಭಿಪ್ರಾಯಗಳನ್ನು ಪೃಥಕ್ಕರಿಸಿ, ವಸ್ತುನಿಷ್ಠವಾಗಿ ವಿಶ್ಲೇಷಿಸಿ, ಹೀಗಿದ್ದರೆ ಚೆನ್ನ, ಹೀಗಿರಬೇಕು. ಇದು ಸಹಜತೆ. ಇಲ್ಲಿ ಎಡವಿದ್ದರಿಂದ ದೇಶ ಹೀಗಾಗಿದೆ. ವ್ಯಕ್ತಿವಿಶಿಷ್ಟ ಸಿದ್ಧಾಂತದ, ಮಾರ್ಕ್ಸ್ವಾದದ ಇರುವಿಕೆ ತತ್ವ ಒಪ್ಪಿಕೊಂಡ ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಪ್ರೊ.ಎಚ್.ಜಿ.ಎಸ್ ತರ್ಕ ಮಂಡಿಸುತ್ತಾ ಇರುವಾಗ ತರಗತಿ ನಿಶ್ಯಬ್ದ"[1] ಎಂದು ದೊಡ್ಡರಂಗೇಗೌಡರು ತಮ್ಮ ಗುರುಗಳ ಪಾಠದ ವೈಖರಿ ಮತ್ತು ಅವರ ಪ್ರಖರ ಚಿಂತನದೃಷ್ಟಿಗಳೆಲ್ಲವನ್ನು ತರಗತಿಯಲ್ಲಿ ಕೇಳಿ ತಮ್ಮ ಬದುಕಿಗೆ ಅಳವಡಿಸಿಕೊಂಡಿದ್ದನ್ನು ನೆನಪಿಸಿಕೊಳ್ಳುತ್ತಾ, ಅವರ ತರಗತಿ ತಮ್ಮ ಪಾಲಿಗೆ ವೈಚಾರಿಕ ದಾಸೋಹವಾಗಿದ್ದ ದಿನಗಳ ಸ್ಮರಣೆಗೈದಿದ್ದಾರೆ. ಅಂತಹ ಗುರುಗಳ ಸಾಮಿಪ್ಯ ದೊರಕಿದ್ದಕ್ಕೆ ತಾನು ಸಾಹಿತ್ಯ ಕೃಷಿ ಮಾಡಲು ಸಹಾಯವಾಯಿತು ಎಂದಿದ್ದಾರೆ. 'ಕಣ್ಣು ನಾಲಗೆ ಕಡಲು' ಎಂಬ ತಮ್ಮ ಕೃತಿಯನ್ನು ಎಚ್.ಜಿ.ಎಸ್. ಮೇಷ್ಟ್ರಿಗೆ ಅರ್ಪಿಸುವ ಮೂಲಕ ಗುರು ಕಾಣಿಕೆಯನ್ನು ನೀಡಿದ್ದಾರೆ.

ಚಲನಚಿತ್ರ ರಂಗದಲ್ಲಿ ತಮ್ಮದೇ ವಿಶಿಷ್ಟ ಛಾಪನ್ನು ಮೂಡಿಸಿ ಪ್ರಸಿದ್ಧ ಪೋಷಕನಟರಾಗಿದ್ದವರು ಟಿ.ಎಸ್. ಲೋಹಿತಾಶ್ವರವರು 'ಇಂದಿನ ಲೋಹಿತಾಶ್ವನನ್ನು ತಯಾರು ಮಾಡಿದ ತರಬೇತುದಾರರೆಂದು' ತಮ್ಮ ಗುರುಗಳಾದ ಸಣ್ಣಗುಡ್ಡಯ್ಯನವರನ್ನು ಸ್ಮರಿಸುತ್ತಾರೆ. 'ನನ್ನ ಗುರು, ನನ್ನ ಗೆಳೆಯ' ಎನ್ನುವ ಲೇಖನದಲ್ಲಿ ಎಚ್.ಜಿ.ಎಸ್. ವ್ಯಕ್ತಿತ್ವದ ಆದರ್ಶ ಮಾದರಿ ಎಂಬುದನ್ನು ಸಾದರಪಡಿಸುತ್ತಾರೆ. ಸಣ್ಣಗುಡ್ಡಯ್ಯನವರು ವಿದ್ಯಾರ್ಥಿಗಳ ಪ್ರೀತಿಯ ಮೇಷ್ಟ್ರಾಗಿ, ತಿಳಿವಿನ ಕಣಜದ ಮೂರ್ತಿಯಂತಿದ್ದರು ಎಂಬುದನ್ನು ಹೀಗೆ ದಾಖಲಿಸಿದ್ದಾರೆ. "ವಿದ್ಯಾರ್ಥಿಗಳ ಗಮನವನ್ನು ಚೂಪುಗಲ್ಲಿನ ಹಾಗೆ ತಮ್ಮ ಮಾತುಗಾರಿಕೆಯ ಮೋಡಿಯಲ್ಲಿ ಸೆಳೆದು ವಿಜೃಂಭಿಸುವ ಉಪನ್ಯಾಸಕರ ನಡುವೆ ತೀರಾ ಗೌಣ. ಮಾತುಗಾರಿಕೆಯ ಬೀಸಿನಲ್ಲಿ ಪದಪುಂಜಗಳ ಹಿಂಡನ್ನೇ ರಾಚಿ

ವಿದ್ಯಾರ್ಥಿಗಳ ಅಚ್ಚರಿಗೆ ಇವರೆಂದೂ ಯತ್ನಿಸಲಿಲ್ಲ. ವಿದ್ಯಾರ್ಜನೆಯನ್ನು ಗಂಭೀರವಾಗಿ ಪರಿಗಣಿಸಿದವರ ನಡುವೆ ಇವರೊಂದು ತಿಳಿವಿನ ಕಣಜ. ಆಡುವ ಪ್ರತಿ ಮಾತೂ, ಪದಕ್ಕೂ, ಪರ್ಯಾಯವಾದ್ದು ಇನ್ನೊಂದಿಲ್ಲ ಎನ್ನುವಷ್ಟರ ಮಟ್ಟಿನ ಇವರ ಕರಾರುವಾಕ್ಕುತನ ನನ್ನಂತಹ ವಿದ್ಯಾರ್ಥಿಗಳನ್ನು ದಂಗುಬಡಿಸುತ್ತಿತ್ತು."[2] ಎನ್ನುವಲ್ಲಿ ತನ್ನ ವೃತ್ತಿಗೆ ನ್ಯಾಯ ಸಲ್ಲಿಸುವಲ್ಲಿ ಪ್ರಾಮಾಣಿಕರಾಗಿದ್ದು, ತಮ್ಮ ವಿಶಿಷ್ಟ ಗ್ರಹಿಕೆಯಿಂದ, ವಿಚಾರಬದ್ಧ ಆಲೋಚನೆಗಳಿಂದಲೇ ಶಿಷ್ಯಬಳಗವನ್ನು ಆಕರ್ಷಿಸುವ ಕಲೆಗಾರಿಕೆಯ ಗುಣಶೀಲತೆಯನ್ನು ಹೊಂದಿದ್ದನ್ನು ಲೋಹಿತಾಶ್ವರವರು ಮನೋಜ್ಞವಾಗಿಯೇ ಚಿತ್ರಿಸಿದ್ದಾರೆ. ಆದರೆ ಇವರ ಪ್ರಖರವಾದ ವೈಚಾರಿಕತೆ ಅರ್ಥವಾಗದ ವಿದ್ಯಾರ್ಥಿಗಳಿಗೆ ತರಗತಿ ನೀರಸ ಎನಿಸಿದ್ದು ಹೌದು ಎಂದೂ ಅಭಿಪ್ರಾಯ ಪಡುತ್ತಾರೆ.

ತಾವು ನಿರ್ವಹಿಸುತ್ತಿದ್ದ ಪಠ್ಯಗಳಲ್ಲಿ, ವಿಚಾರಶೀಲತೆಯನ್ನು ಗುರುತಿಸಿ ಅವುಗಳೆಲ್ಲವನ್ನು ತಮ್ಮ ಶಿಷ್ಯರಿಗೆ ಮನನ ಮಾಡಿಸುವ ಮೂಲಕ ಅವರನ್ನು ವಿಚಾರವಂತರನ್ನಾಗಿ ರೂಪಿಸಿ ಸಾಹಿತ್ಯ ಮತ್ತು ಸಮಾಜ ವಲಯದಲ್ಲಿ ಅವರುಗಳಿಗೊಂದು ವಿಶಿಷ್ಟ ಸ್ಥಾನ ದೊರೆಯುವಂತೆ ಮಾಡಿದ್ದಲ್ಲದೆ. ಉತ್ತಮ ಮಾರ್ಗದರ್ಶನ ತಮ್ಮ ಪ್ರಖರವಾದ ವೈಚಾರಿಕ ಚಿಂತನೆಗಳು ಅವರಲ್ಲಿ ಬೇರು ಬಿಡುವಲ್ಲಿ ಇವರ ಪಾತ್ರ ಮಹತ್ತರವಾಗಿದ್ದನ್ನು ಇಲ್ಲಿ ಗುರುತಿಸಬಹುದು.

ಸಣ್ಣಗುಡ್ಡಯ್ಯನವರು ತಮ್ಮ ಸುತ್ತಲಿನ ಸಮಕಾಲೀನ ಚರ್ಚೆ, ಹೋರಾಟಗಳಿಗೆ ಸ್ಫೂರ್ತಿದಾಯಕ ಶಕ್ತಿಯಾಗಿದ್ದರು. ತಮ್ಮದೇ ಎಡಪಂಥೀಯ ಚಿಂತನೆಗಳಿಂದ ತುಮಕೂರು ಜಿಲ್ಲೆಯಾದ್ಯಂತ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದರು. ತಮ್ಮ ಸುತ್ತಮುತ್ತಲಿನ ಸಾಮಾಜಿಕ ವಿದ್ಯಮಾನಗಳಿಗೆ ಪ್ರತಿಕ್ರಿಯಿಸಿ, ವಿದ್ಯಾರ್ಥಿಗಳ ಮನಸ್ಸಿನಲ್ಲಿ ಹರಿತ ತೀಕ್ಷ್ಣ ಬುದ್ಧಿಯ ಆಲೋಚನೆ ಹುಟ್ಟಿಸುತ್ತಿದ್ದರು. ಸಾಹಿತ್ಯಿಕ ಕ್ರಿಯಾಶೀಲತೆಗೆ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡು ಸಾರ್ಥಕ್ಯ ಸಾಧಿಸಿದ್ದನ್ನು ಇವರ ಶಿಷ್ಯರು ಗುರುತಿಸಿದ್ದಾರೆ. ಅವರ ವ್ಯಕ್ತಿತ್ವವನ್ನು ಪರಿಚಯಿಸುತ್ತಾ ಎಂದಿಗೂ ಜಾತಿಮತಗಳ ಕೊಳಕಿನಲ್ಲಿರದೇ ಜಾತ್ಯತೀತವಾದಿಯಾಗಿ ಬೆಳೆದು, ತಾನು ನಂಬಿದ್ದ ಸಿದ್ಧಾಂತಗಳಿಗೆ ತಕ್ಕಂತೆ ಬದುಕಿದ ಹಠವಾದಿ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಸಣ್ಣಗುಡ್ಡಯ್ಯನವರಿಗೆ ತುಮಕೂರಿನ ಸಾಂಸ್ಕೃತಿಕ ಪ್ರಜ್ಞಾವಲಯದ ಅವಿಭಾಜ್ಯ ಅಂಗವಾಗಿ ಸದಾ ಜನಪರವಾಗಿ ತುಡಿಯುವ ಮನಸ್ಸಿತ್ತು. ಇಂತಹ ಸಕಾರಣದಿಂದಲೇ ಬಹಳಷ್ಟು ಪ್ರಾಜ್ಞರು ಇವರ ಸಾನಿಧ್ಯದಲ್ಲಿ ಬೆರೆಯುತ್ತಿದ್ದರು. ಬೆರೆಯಲು ಹಾತೊರೆಯುತ್ತಿದ್ದವರಿಗೆ ಸಾಮೀಪ್ಯದಲ್ಲಿ ಇದ್ದುಕೊಂಡು ಸೂಕ್ತ ರೀತಿಯ ಸಲಹೆ ಸೂಚನೆಗಳನ್ನು ನೀಡಿ, ಕ್ರಿಯಾಶೀಲ ವ್ಯಕ್ತಿಗಳನ್ನಾಗಿ ರೂಪಿಸುವ ವ್ಯಕ್ತಿರೂಪದ

ಶಕ್ತಿಯಾಗಿದ್ದರು.

ಇವರು ತುಮಕೂರಿನಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪರಿಸರ ನಿರ್ಮಾಣ ಮಾಡಲು ಶ್ರಮಿಸಿದ್ದು ಅನೇಕ ಸಂಘ ಸಂಸ್ಥೆಗಳ ಮೂಲಕ ದುಡಿದಿರುವುದು ಗಮನಾರ್ಹ. ಎಪ್ಪತ್ತರ ದಶಕದಲ್ಲಿ ತುಮಕೂರಿನಲ್ಲಿ ಮಿಂಚಿ ಮಾಯವಾದ 'ನಿಕಷ' ಎಂಬ ಪತ್ರಿಕೆ ಹೊರಡಿಸಿದ್ದರು. 'ಒಡನಾಡಿ' ಎಂಬ ಪತ್ರಿಕೆಯ ಸಂಪಾದಕ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದರು, ತುಮಕೂರು ನಗರದಲ್ಲಿ ಜನತಾ ಪುಸ್ತಕಾಲಯ ತೆರೆದಿದ್ದರು. 'ಸಮುದಾಯ' ಎಂಬ ನಾಟಕಕ್ಕೆ ಸಂಬಂಧಿಸಿದ ಸಂಸ್ಥೆಯನ್ನು ಆರಂಭಿಸಿದ್ದು, ಹಲವು ಪ್ರಗತಿಪರ ಆಶಯವುಳ್ಳ ನಾಟಕಗಳನ್ನು ಆಡಿಸುವ ಮೂಲಕ ಜನರನ್ನು ವಿಚಾರವಂತರನ್ನಾಗಿ ಮಾಡುವಲ್ಲಿ ಶ್ರದ್ಧೆ ವಹಿಸಿದ್ದಾರೆ. 'ಅಕ್ಷಯ ಪ್ರಕಾಶನ' ಮುಂತಾದ ಸಂಸ್ಥೆಗಳನ್ನು ಕೆಲವು ಕಾಲ ಕಟ್ಟಿಕೊಂಡು ಇಲ್ಲಿನ ಸಾಂಸ್ಕೃತಿಕ ಇತಿಹಾಸಕ್ಕೆ ತಮ್ಮದೇ ಕೊಡುಗೆಯನ್ನು ಕೊಟ್ಟಿದ್ದಾರೆ.

**ಕೊನೆ ಟಿಪ್ಪಣಿಗಳು:**

1. ದೊಡ್ಡರಂಗೇಗೌಡ, (3.7.2005), ಪ್ರಭಾವ ಬೀರಿದ ಪಂಡಿತರು, ಕರ್ಮವೀರ ಪತ್ರಿಕೆ, ಬೆಂಗಳೂರು, ಪು.ಸಂ. 7
2. ಲೋಹಿತಾಶ್ವ ಟಿ.ಎಸ್., (2009), ಅಕ್ಕಡಿಸಾಲು, ಭದ್ರಹವೇಲಿ ಪ್ರಕಾಶನ, ಬೆಂಗಳೂರು, ಪು.ಸಂ. 82

**ಆಕರ ಗ್ರಂಥಗಳು:**


1. ಸಣ್ಣಗುಡ್ಡಯ್ಯ ಎಚ್.ಜಿ., (1961), ಅಭೀಪ್ಸೆ, ಅಕ್ಷಯ ಪ್ರಕಾಶನ, ತುಮಕೂರು.
2. ಸಣ್ಣಗುಡ್ಡಯ್ಯ ಎಚ್.ಜಿ., (1993), ಏಕಾಂತ ಮತ್ತು ಇತರ ಪ್ರಬಂಧಗಳು. ಅಕ್ಷಯ ಪ್ರಕಾಶನ, ತುಮಕೂರು.
3. ಸಣ್ಣಗುಡ್ಡಯ್ಯ ಎಚ್.ಜಿ., (1998), ಹದ್ದು ಮತ್ತು ಇತರ ಪ್ರಬಂಧಗಳು, ನಮ್ಮ ಪ್ರಕಾಶನ, ತಿಪಟೂರು.
4. ಸಣ್ಣಗುಡ್ಡಯ್ಯ ಎಚ್.ಜಿ., (2004), ವಸಂತದ ಕನಸುಗಳು, ಅಕ್ಷಯ ಪ್ರಕಾಶನ, ತುಮಕೂರು.
5. ಸಣ್ಣಗುಡ್ಡಯ್ಯ ಎಚ್.ಜಿ., (2004), ಭಿನ್ನ, ಅಕ್ಷಯ ಪ್ರಕಾಶನ, ತುಮಕೂರು.


**ಪರಾಮರ್ಶನ ಗ್ರಂಥಗಳು:**


1. ಲೋಹಿತಾಶ್ವ ಟಿ.ಎಸ್., (2009), ಅಕ್ಕಡಿಸಾಲು, ಭದ್ರಹವೇಲಿ ಪ್ರಕಾಶನ, ಬೆಂಗಳೂರು.
2. ದೊಡ್ಡರಂಗೇಗೌಡ, (3.7.2005), ಪ್ರಭಾವ ಬೀರಿದ ಪಂಡಿತರು, ಕರ್ಮವೀರ ಪತ್ರಿಕೆ, ಬೆಂಗಳೂರು



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.